


ಮಗ: ಅಮ್ಮ ನಿದ್ರೆ ಬರ್ತಿಲ್ಲ ಕಥೆ ಹೇಳಮ್ಮ ಕೇಳ್ತೇನಿ.
ಅಮ್ಮ: ಇರು ನಿಮ್ಮ ಅಪ್ಪ ಬರ್ತಾರೆ, ಯಾಕೆ ಲೇಟು ಅಂತೀನಿ. ಆಗ ಕಥೆ ಹೇಳ್ತಾರೆ ಕೇಳುವಿಯಂತೆ.

ಸೇತುವೆ ಮೇಲಿನಿಂದ ಬಸ್ ಕೆಳಗೆ ಉರುಳಿಬಿತ್ತು. ಗಾಯಗೊಂಡವರೆಲ್ಲರೂ ತಮ್ಮ ಪ್ರಾಣ ಉಳಿಸಿಕೊಳ್ಳಲು ಓಡುತ್ತಿದ್ದರು.
ತಿಮ್ಮ: ಗುಂಡ ಏನು ಮಾಡ್ತಿದ್ದೀಯಾ ಅಲ್ಲಿ? ಬೇಗ ಓಡು.
ಗುಂಡ: ಕಂಡಕ್ಟರ್‌ನನ್ನು ಹುಡುಕುತ್ತಿದ್ದೇನೆ.
ತಿಮ್ಮ: ಯಾಕೆ?
ಗುಂಡ: ಟಿಕೆಟ್ ಹಿಂದೆ ಐದು ರೂಪಾಯಿ ಚಿಲ್ಲರೆ ಬರೆದಿದ್ದ, ಅದನ್ನು ತಗೊಳ್ಳುವುದಕ್ಕೆ.




ಪತ್ನಿ: ಇಲ್ನೋಡಿ ನಾಯಿಯ ಈ ಬಟ್ಟಲಲ್ಲಿ ಹೆಂಡ ಹಾಕಿದರೆ ವಾಸನೆ ನೋಡಿ ಕುಡಿಯದೆ ಹಾಗೇ ಬಿಟ್ಟಿತು. ನಂತರ ಅದನ್ನು ತೆಗೆದು ಅದೇ ಬಟ್ಟಲಿಗೆ ಹಾಲನ್ನು ಹಾಕಿ, ಗಟಗಟ ಕುಡಿಯಿತು. ಈ ಪ್ರಯೋಗದಿಂದ ನಿಮಗೇನು ಅರ್ಥವಾಯ್ತು ಹೇಳಿ.
ಪತಿ: ಅಂದರೆ ಹೆಂಡ ಕುಡಿಯದವರು ನಾಯಿ ಅಂತ ಅರ್ಥವಾಯ್ತು.

ಮೇಷ್ಟ್ರು: ಬಸ್ ಡ್ರೈವರ್‌ಗೂ ಕಂಡಕ್ಟರ್‌ಗೂ ವ್ಯತ್ಯಾಸವೇನು?
ಗುಂಡ: ಸರ್, ಕಂಡಕ್ಟರ್ ಮಲಗಿದರೆ ಯಾರು ಟಿಕೆಟ್ ತಗೊಳ್ಳಲ್ಲ. ಅದೇ ಡ್ರೈವರ್ ಮಲಗಿದರೆ ಎಲ್ಲರೂ ಟಿಕೆಟ್ ತಗೋತಾರೆ ಸರ್!




ಗಂಡ: ನಿನ್ನೆ ರಾತ್ರಿ ನಿದ್ರೆಯಲ್ಲಿ ನೀನು ನನಗೆ ಏನೇನೂ ಬೈಯ್ತಿದ್ದೆ ಕಣೇ.
ಹೆಂಡತಿ: ಅದು ನಿಮ್ಮ ಭ್ರಮೆ
ಗಂಡ: ಏನು ಭ್ರಮೆ?
ಹೆಂಡತಿ: ನಾನು ನಿದ್ದೆ ಮಾಡ್ತಿದ್ದೆ ಅನ್ನುವುದು.

ಹುಡುಗಿ: ನಿಮ್ಮ ಬೇಕರಿಯಲ್ಲಿ ಸಕ್ಕರೆ ಮತ್ತು ಕೊಬ್ಬು ಇಲ್ಲದಿರುವ ಐಟಂ ಏನಿದೆ?
ಬೇಕರಿಯವನು: ನ್ಯಾಪ್‌ಕಿನ್ ಇದೆ ಕೊಡ್ಲಾ ಮೇಡಂ?

ಕಲ್ಲೇಶಿ: ನಾನು ಬ್ಯಾಂಕ್‌ನಲ್ಲಿ ಒಂದು ರೂಪಾಯಿನೂ ಇಟ್ಟಿಲ್ಲ. ಆದ್ರೂ ಇನ್‌ಕಮ್ ಟ್ಯಾಕ್ಸ್‌ನವರಿಂದ ನೋಟಿಸ್ ಬಂದಿದೆ.
ಮಲ್ಲೇಶಿ: ಹೌದಾ ಅದ್ಹೆಂಗ್ಲಾ ನೋಟಿಸ್ ಬಂತು? ಅದರಲ್ಲಿ ಏನಂತ ಬರೆದಿತ್ತು?
ಕಲ್ಲೇಶಿ: 'ಥೂ ಸೋಮಾರಿ ಏನಾದರೂ ಕೆಲಸ ಮಾಡಿ ಸಂಪಾದನೆ ಮಾಡು' ಅಂತ ಬರೆದಿತ್ತು ಕಣ್ಲಾ.

ಗುಂಡನಿಗೆ ವಾರವಿಡೀ ಹುಡುಗಿಯೊಬ್ಬಳು ಚಪ್ಪಲಿಯಲ್ಲಿ ಹೊಡೆದ ಕನಸು ಬೀಳುತ್ತಿತ್ತು. ಆದರಿಂದ ಹೆದರಿಕೊಂಡ ಆತ ಅಗತ್ಯ ಕೆಲಸವಿದ್ದಾಗಲೂ ಕೂಡ ಬ್ಯಾಂಕ್‌ಗೆ ಹೋಗಲೇ ಇಲ್ಲ. ಏಕೆಂದರೆ ಬ್ಯಾಂಕ್‌ನ ಮುಂದೆ 'ನಿಮ್ಮ ಕನಸುಗಳನ್ನು ನಾವು ನನಸಾಗಿಸುತ್ತೇವೆ' ಎಂದು ಬರೆದಿತ್ತು ಅದಕ್ಕೆ.

ಅಮ್ಮ: ಸೋಫಾ ಇರೋದು ಕುಣಿಯೋಕೆ ಅಲ್ಲಾ, ಕೂತ್ಕೊಳ್ಳಕ್ಕೆ.
ಚಿಂಟು: ಚಪ್ಪಲಿ ಇರೋದು ಕಾಲಿಗೆ ಹಾಕೋದಕ್ಕೆ, ಹೊಡೆಯೋಕ್ಕಲ್ಲಲ್ಲ. ಅದರಿಂದ ಯಾಕೆ ಹೊಡೆಯುತ್ತೀಯಾ?
(ಆಮೇಲೆ ಇನ್ನೊಂದು ಬಿತ್ತು)




ಕಲ್ಲೇಶಿ: ನಿನ್ನ ಹೆಂಡ್ತಿ ಯಾಕೆ ಯಾವಾಗಲೂ ಕೋಪದಲ್ಲೇ ಇರ್ತಾಳೆ?
ಮಲ್ಲೇಶಿ: ಒಮ್ಮೆ ಬಾಯಿ ತಪ್ಪಿ ಕೋಪದಲ್ಲಿ ಕೂಡ ನೀನು ತುಂಬಾ ಸುಂದರವಾಗಿ ಕಾಣ್ತೇಯಾ ಅಂದೆ. ಆವಾಗಿನಿಂದ ಅವಳು ಕೋಪದಿಂದ ಇರ್ತಿದ್ದಾಳೆ.

ಸಂಗ್ರಹ: ಶರದ ಕುಲಕರ್ಣಿ, ಬೀದರ್